ಇಲ್ಲ, ಒಗ್ಗಟ್ಟಿಲ್ಲ. ಸರ್ಕಾರ ರೈತರ ವಿರೋಧಿ ಧೋರಣೆಯನ್ನು ತಾಳಿದೆ. ರಾಜ್ಯದಲ್ಲಿ ಬರ ಬರತಕ್ಕಂಥ ಸ್ಥಿತಿಯಲ್ಲಿ ಭಿನ್ನಮತ ಎಂದು ಹೇಳಿ ಅವರು ಜಗಳ ಕಾಯುತ್ತಿದ್ದಾರೆ. ಇವರ ಧೋರಣೆಯನ್ನು ವಿರೋಧ ಮಾಡಿ ನಾವು ಸಭಾತ್ಯಾಗ ಮಾಡುತ್ತೇವೆ.

ಜನತಾದಳ (ಯು) ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಭೈರೇಗೌಡ: ಹೊಸದಾಗಿ ಸಾಲ ಕೊಡುತ್ತೇವೆ ಎನ್ನುವ ಒಂದು ಮಾತನ್ನೂ ಕೂಡ ನೀವು ಹೇಳಲಿಲ್ಲ.

(ನಂತರ ಮಾನ್ಯ ಸದಸ್ಯರೂ ಕೂಡ ಸಭಾತ್ಯಾಗ ಮಾಡಿದರು)

ಶ್ರೀ ಮಲ್ಲಿಕಾರ್ಜುನ ಖರ್ಗೆ (ಸಚಿವರು): ಮಾನ್ಯ ಅಧ್ಯಕ್ಷರೇ, ಮಾನ್ಯ ಭೈರೇಗೌಡರ ಸರ್ಕಾರ ಇದ್ದಾಗ ಶ್ರೀಮಾನ್ ಶಿವಕುಮಾರ್ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿದ್ದರು. ಇದೇ ರೀತಿಯಾಗಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅದಕ್ಕಾಗಿ ರೈತರಿಗೆ ಏನು ಪರಿಹಾರ ಕೊಡಬೇಕು ಎನ್ನುವುದರ ಬಗ್ಗೆ ಅವರ ಪಕ್ಷದವರೇ ಆದ ಒಬ್ಬರು ಶಾಸಕರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಿದ್ದರು. ಆ ಸಮಿತಿ ಸದನಕ್ಕೆ ಒಂದು ವರದಿಯನ್ನು ಕೊಟ್ಟರು. ಅದರ ಪ್ರಕಾರ ಎಲ್ಲೆಲ್ಲಿ ತೊಗರೀಬೇಳೆಗೆ ಹಾನಿಯಾಗಿದೆ, ರೈತರೇನು ತೊಂದರೆಗೆ ಒಳಗಾಗಿದ್ದಾರೆ, ಅವರಿಗೆ ಏನು ಪರಿಹಾರ ಕೊಡಬೇಕು, ಪ್ರತಿ ಎಕರೆಗೆ ಎಷ್ಟು ಪರಿಹಾರ ಕೊಡಬೇಕು ಎನ್ನತಕ್ಕಂಥಾದ್ದನ್ನು ಅವರು ಶಿಫಾರಸ್ಸು ಮಾಡಿದ್ದರು. ಆ ಶಿಫಾರಸ್ಸುಗಳಲ್ಲಿ ಒಂದು ಚೂರು ಕೂಡ ಇಂಪ್ಲಿಮೆಂಟ್ ಮಾಡಲಿಲ್ಲ. ಅವರೇ ಒಪ್ಪಿಕೊಂಡು ಅವರ ಪಕ್ಷದವರೇ ಆದ ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಿಸಿ ಸಮಿತಿಯನ್ನು ಮಾಡಿದ್ದು. ಇವತ್ತು ನಮಗೆ ಏನು ಆಯಿತು ಎಂದು ಬುದ್ಧಿ ಹೇಳುವುದಕ್ಕೆ ಹೊರಟ್ಟಿದ್ದಾರೆ. ನಾವು ಅಲ್ಲಿ ಒತ್ತಾಯ ಮಾಡಿದ್ದಕ್ಕೆ ಆ ಕಮಿಟಿಯನ್ನು ಅವರು ಮಾಡಿದ್ದರು. ಆ ಕಮಿಟಿಯನ್ನು ಮಾಡಿದ ಮೇಲೆ ಸದನದ ಸದಸ್ಯರೆಲ್ಲರೂ ಕೂಡ ಹೋಗಿ ಒಂದು ವರದಿಯನ್ನು ಸದನಕ್ಕೆ ಕೊಟ್ಟು ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತನ್ನಿ ಎಂದು ಹೇಳಿದರೆ ಅದರಲ್ಲಿ ಒಂದನ್ನೂ ಕೂಡ ಅನುಷ್ಠಾನಕ್ಕೆ ತರಲಿಲ್ಲ. ಈಗ ನಮಗೆ ಬುದ್ಧಿವಾದ ಹೇಳುವುದ್ಕೆ ಹೊರಟಿದ್ದಾರೆ. ಮತ್ತೆ ಇವರ ಸರ್ಕಾರ ಅಧಿಕಾರಕ್ಕೆ ಬಂದರೆ ಬಡ್ಡಿ ಸಹಿತ ಕೊಡುತ್ತಾರಂತೆ. ಆವಾಗ ಬಡ್ಡಿಯನ್ನೆಲ್ಲಾ ಮುಳುಗಿಸಿಕೊಂಡಂಥವರು ಈಗ ಬಡ್ಡಿಸಹಿತ ಕೊಡುತ್ತೇವೆ ಎಂದು ಹೇಳಿದ್ದಾರೆ. ಆದ್ದರಿಂದ ಇದು ಬರೇ ವಿರೋಧಕ್ಕಾಗಿ ವಿರೋಧ ಮಾಡಬೇಕು ಎನ್ನತಕ್ಕಂಥ ದೃಷ್ಟಿಯಿಂದ ಹೇಳಿದ್ದಾರೆಯೇ ಹೊರತಾಗಿ ಬೇರೇನೂ ಇಲ್ಲ. ಸೀಜನಲ್ ಕಂಡಿಷನ್ಸ್ ಬಗ್ಗೆ ತಮಗೆ ಗೊತ್ತಿದೆ. ಜೂನ್ -ಜುಲೈ ತಿಂಗಳಲ್ಲಿ, ಇನ್ನೂ ಪ್ರಾರಂಭದಲ್ಲಿ ನಾವು ಇದ್ದೇವೆ. ಕಾರೀಫ್‌ಕ್ರಾಪ್ ಕೆಲವು ಕಡೆ ಹೋಗಿದೆ, ಇಲ್ಲವೆಂದು ಅಲ್ಲ. ವಿಶೇಷವಾಗಿ ನಮ್ಮ ಉತ್ತರ ಕರ್ನಾಟಕದಲ್ಲಿ ಕಾರೀಫ್‌ಕ್ರಾಪ್ ಮೇಲೆ ಅವಲಂಬಿಸಿದವರು ಇವತ್ತು ಬಹಳ ನಿರಾಶರಾಗಿದ್ದಾರೆ. ಇದಕ್ಕೆ ಏನು ಪರಿಹಾರ ಕಂಡುಹಿಡಿಯಬೇಕು. ಯಾವ ರೀತಿಯಾಗಿ ಸಹಾಯ ಮಾಡಬೇಕು ಎನ್ನತಕ್ಕಂಥಾದ್ದರ ಬಗ್ಗೆ ಸಲಹೆ ಕೊಟ್ಟಿದ್ದರೆ ವಿಂಡಿತವಾಗಿಯೂ ಸರ್ಕಾರ ಅದನ್ನು ಪರಿಶೀಲನೆ ಮಾಡಿ ತನ್ನ ಇತಿಮಿತಿಯಲ್ಲಿ ಮತ್ತು ಇದೇರೀತಿಯಾಗಿ ಸಿ.ಆರ್ ಫಂಡ್‌ನ್ನು ಯಾವರೀತಿ ಉಪಯೋಗ ಮಾಡಬೇಕು, ಕೇಂದ್ರ ಸರ್ಕಾರದಿಂದ ಏನು ಕೇಳಬೇಕು, ಬೀಜದ ವ್ಯವಸ್ಥೆ ಏನು ಮಾಡಬೇಕು ಅಥವಾ ಮೇವಿನ ವ್ಯವಸ್ಥೆ ಏನು ಮಾಡಬೇಕು ಎಂದು ಬಗ್ಗೆ ಚಿಂತನೆಯನ್ನು ಮಾಡಬಹುದಾಗಿತ್ತು.